**ದಿನಾಂಕ 19.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ: ಶ್ರೀ.ಯು.ಎಸ್. ವಕೀಲರಿಂದಃ-**

ದಾವಾ ಸ್ವತ್ತಿಗೆ ಸಂಬಂಧಿಸಿದ ಇ-ಸ್ವತ್ತನ್ನು ಹಾಜರುಪಡಿಸಿದ್ದು ಅದನ್ನು ನಿಪಿ.43 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂಧಿಸಿದ ಕೈಬರಹದ ಅಸೆಸ್ಮೆಂಟ್ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.44 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಎಸ್.ಎನ್.ಎ. ವಕೀಲರಿಂದಃ-**

2 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ನನ್ನ ವಕೀಲರ ಮೂಲಕ ತೆಗೆಸಿಕೊಂಡು ನೋಡಿರುತ್ತೇನೆ. ಸಾಮಾನ್ಯವಾಗಿ ಇ-ಸ್ವತ್ತಿನಲ್ಲಿ ಮೂಲ ಮಾಲಿಕತ್ವದ ಬಗ್ಗೆ ಹಾಗೂ ಹೇಗೆ ಬೇರೆಯವರಿಗೆ ವರ್ಗಾವಣೆ ಯಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ನಿಪಿ.43 ರಲ್ಲಿ ಖಾತಾ ಸಂ.5079 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ.44 ರಲ್ಲಿಯೂ ಸಹ ಖಾತಾ ನಂಬರನ್ನು ಕಾಲಂ ನಂ.1 ರಲ್ಲಿ ಹಾಗೂ 10 ರಲ್ಲಿ ತಿದ್ದಿ ಒತ್ತಿ ಬರೆಯಲಾಗಿರುತ್ತದೆ ಎಂದರೆ, ಸಾಕ್ಷಿಯು ಅವರು ಆ ರೀತಿ ಬರೆದಿರುತ್ತಾರೆ, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಎಂದರೆ ಮುನಿಸಿಪಾಲಿಟಿಯ ಕ್ಲರ್ಕ್ ಆ ರೀತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನನಗೆ ನಿಡಿ.14 ರ ಹಿಂಬರಹವನ್ನು ಬೀರೂರಿನ ಮುನಿಸಿಪಾಲಿಟಿಯವರು ನೀಡಿರುತ್ತಾರೆ ಎಂದರೆ ಸರಿ. ನಿಡಿ.14 ರಲ್ಲಿ ಖಾತಾ ನಂ.5129/5079 ರ ಇ-ಸ್ವತ್ತನ್ನು 2 ನೇ ಪ್ರತಿವಾದಿಯು ಕೇಳಿದಾಗ ಈ ದಾವೆಯು ಚಾಲ್ತಿಯಲ್ಲಿ ಇರುವುದರಿಂದ ಇ-ಸ್ವತ್ತನ್ನು ಕೊಡಲು ಬರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ ಎಂದರೆ, ಸಾಕ್ಷಿಯು ಈ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.14 ರ ಹಿಂಬರಹವನ್ನು ನೀಡಿದ್ದರೂ ಸಹ ನಾನು ಮುನಿಸಿಪಾಲಿಟಿಯ ಅಧಿಕಾರಿಗಳೊಂದಿಗೆ ಶರೀಕ್ ಆಗಿ ರಾಜಕೀಯ ಮತ್ತು ಆರ್ಥಿಕ ಪ್ರಭಾವವನ್ನು ಬೀರಿ ನಿಪಿ.43 ಮತ್ತು 44 ರ ದಾಖಲೆಗಳಲ್ಲಿ ನನ್ನ ತಂದೆ ರಾಮಚಂದ್ರ ಹಾಗೂ ನನ್ನ ಚಿಕ್ಕಪ್ಪ ರಾಜಣ್ಣರವರ ಹೆಸರಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಜಂಟಿಯಾಗಿ ಸೇರಿಸಿ ಇ-ಸ್ವತ್ತನ್ನು ಸೃಷ್ಠಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಖಾತಾ ಸಂ.5079 ಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಹಾಗೂ ಚಿಕ್ಕಪ್ಪನವರಿಗಾಗಲಿ, ನನ್ನ ಮುತ್ತಜ್ಜ ಕುಲುಮೆ ರಂಗಯ್ಯನವರಿಗಾಗಲಿ ಮಾಲಿಕತ್ವ ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುನಿಸಿಪಾಲಿಟಿ ಅಧಿಕಾರಿಗಳೊಂದಿಗೆ ಶರೀಕ್ ಆಗಿ ಪ್ರತಿವಾದಿಯರ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ.43 ಮತ್ತು 44ರ ದಾಖಲೆಗಳನ್ನು ಸೃಷ್ಠಿಸಿಕೊಂಡು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆ ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸರಿ. ನಿಪಿ.41ರಲ್ಲಿ ಕಾಣುವ ಹೆಂಚಿನ ಮನೆಯ ಮುಂದೆ ತಂತಿ ಹಾಕಿರುವ ನಿವೇಶನ ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಯನ್ನು ಖರೀದಿಸಿದ ಮೂಲ ಮಾಲೀಕರಾದ ಮರುಡಪ್ಪ ಬಿನ್ ಸಿದ್ದಪ್ಪರವರಿಂದ ಅಳತೆ 27 x 34ರ ನಿವೇಶನವನ್ನು ಖರೀದಿಸಿ ನಂತರ ಅದರಲ್ಲಿ ಪೂರ್ತಿ ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮರುಡಪ್ಪನವರನ್ನು ನಾನು ನೋಡಿರುವುದಿಲ್ಲ. ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಯ ನಿವೇಶನವನ್ನು ಮರುಡಪ್ಪನವರು 1ನೇ ಪ್ರತಿವಾದಿಯ ಗಂಡನಾದ ರುದ್ರಪ್ಪನವರಿಗೆ ಸಾಕ್ಷಿಗಳಾದ ಬಿ.ಎಂ.ಚಂದ್ರಪ್ಪ, ಸಾಬ್ ಜಾನ್ ಮತ್ತು ರಾಧಮ್ಮ ಎಂಬುವವರ ಸಮಕ್ಷಮ ಒಪ್ಪಿಗೆ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡ ಸದರಿ ನಿವೇಶನವನ್ನು ಖರೀದಿಸಿದ ನಂತರ 1ನೇ ಪ್ರತಿವಾದಿ ಮತ್ತು 1ನೇ ಪ್ರತಿವಾದಿಯ ಗಂಡ ಇಬ್ಬರು ಸೇರಿ ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಯ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿ. ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಗೆ 1ನೇ ಪ್ರತಿವಾದಿಯು ವಿದ್ಯುತ್ ಬಿಲ್ಲು ಮತ್ತು ಕಂದಾಯವನ್ನು ಪಾವತಿಸಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಒಪ್ಪಿಗೆ ಪತ್ರದಂತೆ ಕೆಂಪು ಹೆಂಚಿನ ಮನೆಯನ್ನು 1ನೇ ಪ್ರತಿವಾದಿಯ ಗಂಡ ತನ್ನ ಹೆಸರಿಗೆ ಖಾತೆ ಇಡಬೇಕು ಎಂದು ದಿನಾಂಕ 23.11.2000ನೇ ಸಾಲಿನಲ್ಲಿ ರೂ.7,344/-ಹಣವನ್ನು ಬೀರೂರಿನ ಪುರಸಭೆಗೆ ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 03.08.2000ನೇ ಸಾಲಿನಲ್ಲಿ ಬೀರೂರು ಮುನಿಸಿಪಾಲಿಟಿಯವರು

ನಿಪಿ.41ರಲ್ಲಿ ಕಾಣುವ ಮನೆಗೆ ಸಂಬಂಧಿಸಿದಂತೆ ಕಂದಾಯವನ್ನು 1ನೇ ಪ್ರತಿವಾದಿಯ ಗಂಡನಿಂದ ಪಾವತಿಸಿಕೊಂಡು ಅವರಿಗೆ ಖಾತೆ ಇಡಬಹುದು ಎಂದು ರೆಸಲ್ಯೂಷನ್ ಅನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ನಾನು ಪಕ್ಕದಲ್ಲಿ ಇದ್ದು ಕಂದಾಯ ಕಟ್ಟುತ್ತಿರುವ ವಿಚಾರ ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೂ, 1ನೇ ವಾದಿ ಮತ್ತು 2ನೇ ವಾದಿಗೆ ಬೀರೂರಿನ ಅಶೋಕನಗರದಲ್ಲಿ ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಮನೆಗಳಿಗೂ, ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಗೂ ಹಾಗೂ ದಾವಾ ಆಸ್ತಿಗೂ ಸುಮಾರು 100 ಮೀ. ಅಂತರವಿರುತ್ತದೆ. ದಾವಾ ಆಸ್ತಿಗೂ ಹಾಗೂ ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಗೂ ನಾನು ಆಗಾಗ ಬಂದು ಹೋಗುತ್ತಿರುತ್ತೇನೆ ಎಂದರೆ ಸರಿ. ನಾನು ಆಗಾಗ ಬಂದು ಹೋಗುತ್ತಿದ್ದುದ್ದರಿಂದ ನಿಪಿ.41ರಲ್ಲಿ ಕಾಣುವ ಕೆಂಪು ಹೆಂಚಿನ ಮನೆಯಲ್ಲಿ ಯಾರು–ಯಾರು ಇರುತ್ತಾರೆ ಎಂದು ನನಗೆ ತಿಳಿದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ.43 ಮತ್ತು 44ರಂತೆ ಇ–ಸ್ವತ್ತು ಆಗುವ ಕಾಲಕ್ಕೆ ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದ ಆರ್.ಎ. ನಂ.40/2021 ಮೇಲ್ಮನವಿ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಆರ್.ಎ.ನಂ.40/2021ರ ಮೇಲ್ಮನವಿಯಲ್ಲಿ ನಿಪಿ.43 ಮತ್ತು 44ರ ದಾಖಲೆಯನ್ನು ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ನಿಪಿ.1 ರಿಂದ 44ರ ದಾಖಲೆಗಳಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಮುತ್ತಜ್ಜ ಕುಲುಮೆ ರಂಗಯ್ಯನವರ ಮಾಲಿಕತ್ವ ತೋರಿಸುವ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುತ್ತಜ್ಜ ಕುಲುಮೆ ರಂಗಯ್ಯನವರಿಗೆ ಯಾವುದೇ ಮಾಲಿಕತ್ವ ಇಲ್ಲದೇ ಇರುವುದರಿಂದ ದಾವಾ ಆಸ್ತಿಗೆ ನಾನಾಗಲಿ, ವಾದಿಗಳಾಗಲಿ ಮತ್ತು ನನ್ನ ಮುತ್ತಜ್ಜ ಕುಲುಮೆ ರಂಗಯ್ಯನವರಿಗಾಗಲಿ ಯಾವುದೇ ಹಕ್ಕು, ಅಧಿಕಾರ ಮತ್ತು ಸ್ವಾಧೀನಾನುಭವ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ.24 ಮತ್ತು 25ರ ಛಾಯಾಚಿತ್ರಗಳಲ್ಲಿ ನಿಂತಿರುವವರು 2ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿಯು ನಿಂತಿರುವ ಜಾಗವು 2ನೇ ಪ್ರತಿವಾದಿಗೆ ಸೇರಿದ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ಖಾತಾ ನಂ.5079 1ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಬರುತ್ತಿದೆ ಎಂದು ಎಸಿ.ಗೆ ಮತ್ತು ಡಿಸಿ.ಗೆ ಅರ್ಜಿಯನ್ನು ಸಲ್ಲಿಸಿ ಅದನ್ನು ತೆಗೆದು ಹಾಕಿ ಎಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ

ಸ್ವಾಕ್ಷಿಯು ನಾವು ಆ ರೀತಿ ಅರ್ಜಿ ಸಲ್ಲಿಸಿರುವುದಿಲ್ಲ, ಆದರೆ ನಮ್ಮ ಖಾತೆಯು ಕೈತಪ್ಪಿ ಹೋಗಿರುತ್ತದೆ ಅದನ್ನು ಪುನರ್ಸ್ಥಾಪಿಸಿ ಎಂದು ಮುನಿಸಿಪಾಲಿಟಿಯವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸಾಮಾನ್ಯವಾಗಿ ಖಾತೆಯ ನಂಬರು, ಹೆಸರು, ಅಳತೆ, ತಪ್ಪಾಗಿ ನಮೂದಾಗಿದ್ದರೆ ಅದಕ್ಕೆ ಸಂಬಂಧಿಸಿದಂತೆ ಎಸಿ. ಮತ್ತು ಡಿಸಿ.ಯವರ ಮುಂದೆ ಅರ್ಜಿಯನ್ನು ಸಲ್ಲಿಸಬೇಕು ಎಂದು ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರು ಸಹ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಠಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಕಡೂರಿನ 2 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯು ಅಸಲು ದಾವಾ ಸಂ.374/2015 ರಂತೆ ಮಾಲಿಕತ್ವ ಮತ್ತು ಸ್ವಾಧೀನತೆಯ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಂಬಂಧಿಸಿದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಗಳ ಆಸ್ತಿಗೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಹೆಸರನ್ನು ಬರೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಪೂರ್ವಜರಾಗಲಿ, ವಾದಿಯರಾಗಲಿ, ನಾನಾಗಲಿ ಎಂದಿಗೂ ಮಾಲಿಕತ್ವ ಮತ್ತು ಸ್ವಾಧೀನವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಮರುಡುಪ್ಪನವರ ತಂದೆಯವರನ್ನು ನಾನು ನೋಡಿರುವುದಿಲ್ಲ. ನಿಡಿ.3 ರ ಕ್ರಯ ಪತ್ರದಂತೆ 1 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿರುವ ಹಳೆ ಖಾತಾ ನಂ.5079 ಕ್ಕೆ ಸಂಬಂಧಿಸಿದಂತೆ ನನ್ನ ತಂದೆಯಾಗಲಿ, ನನ್ನ ಚಿಕ್ಕಪ್ಪನಾಗಲಿ, ಕ್ರಯಕ್ಕೆ ವ್ಯಕ್ತಿಯ ವಿರುದ್ಧವಾಗಲಿ, ಕ್ರಯಕ್ಕೆ ಪಡೆದ 1 ನೇ ಪ್ರತಿವಾದಿಯ ಗಂಡನ ವಿರುದ್ಧವಾಗಲಿ ಯಾವುದೇ ಸಕ್ಷಮದ ಪ್ರಶ್ನಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದಕ್ಕೂ, ನನಗೂ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದಃನ್ಯಾ.ದಂ.,ರವರು ಕಡೂರು.